C.C.No.1241/2021
PW-7
CW-1

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ., ಪಾವಗಡ ನ್ಯಾಯಾಲಯ**

**ಸಿ.ಸಿ. ಸಂಖ್ಯೆ 1241/2021**

**ಪ್ರಾಸಾಃ 07**

**ಚಾಸಾಃ 01**

**ದಿನಾಂಕ 06.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

| | | |
|---|---|---|
| ಸಾಕ್ಷಿದಾರರ ಹೆಸರು | - | ಪ್ರಕಾಶ್ ಟಿ.ಎಂ |
| ತಂದೆಯ ಹೆಸರು | - | ಮಲ್ಲಿಕಾರ್ಜುನಯ್ಯ |
| ವಯಸ್ಸು | - | 49 ವರ್ಷ |
| ವೃತ್ತಿ | - | ವ್ಯವಸಾಯ |
| ವಾಸ ಸ್ಥಳ | - | ತಿಪ್ಪಗಾನಹಳ್ಳಿ |

**ಮುಖ್ಯ ವಿಚಾರಣೆಃ  ಮಾನ್ಯ ಎ.ಪಿ.ಪಿ ರವರಿಂದಃ**

2020 ನೇ ಸಾಲಿನಲ್ಲಿ ನಾನು ತೋಟಕ್ಕೆ ಶೇಂಗಾ ಕಾವಲಿಗೆ ಹೋದಾಗ ನಮ್ಮ ಮನೆಯಲ್ಲಿ ಯಾರು ಇಲ್ಲದ ಸಮಯದಲ್ಲಿ ಯಾರೋ ಕಳ್ಳರು ಮನೆಯಲ್ಲಿ ಅಕ್ರಮವಾಗಿ ಬೀಗ ಹೊಡೆದು ಮನೆ ಪ್ರವೇಶ ಮಾಡಿ ನಮ್ಮ ಮನೆಯಲ್ಲಿದ್ದ 50 ಗ್ರಾಂ ಲಕ್ಷ್ಮಿ ಬೆಳ್ಳಿ ಮುಖವಾಡ ಮತ್ತು ರೂ.20,000/- ವನ್ನು ಕಳ್ಳತನಮಾಡಿಕೊಂಡು ಹೋಗಿರುತ್ತಾರೆ. ನಾನು ಹೊಲದಿಂದ ಬೆಳಗ್ಗೆ 5.30 ಗಂಟೆಗೆ ಮನೆಗೆ ಬಂದು ನೋಡಿದಾಗ ಮನೆಯಲ್ಲಿ ಬೇಗ ಹೊಡೆದಿರುವುದು ಕಂಡು ಬಂದಿರುತ್ತದೆ. ನಂತರ ನಾನು ಪೋಲಿಸಿ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ.  ಸಾಕ್ಷಿ ದೂರನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿರುತ್ತಾರೆ. ಅದನ್ನು ನಿಪಿ-8 ಎಂದು ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.  ನಂತರ ಪೋಲಿಸ್ ರವರು ಬಂದು ಮಹಜರ್ ಬರೆದಿರುತ್ತಾರೆ.  ಸಾಕ್ಷಿ ಮಹಜರ್ ನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿರುತ್ತಾರೆ.

ಅದನ್ನು ನಿಪಿ-9 ಎಂದು ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಚಾಸಾ-2, 3 ರವರು ಇದ್ದು ಸಹಿ ಮಾಡಿದ್ದಾರೆ. ಬೆಳಗ್ಗೆ 10.00 ರಿಂದ 12.00 ಗಂಟೆ ವರೆಗೆ ಪೋಲಿಸ್ ರವರು ಮಹಜರ್ ಬರೆದಿರುತ್ತಾರೆ. ನಮ್ಮ ಮನೆಯಲ್ಲಿ ಕಳ್ಳತನವಾದ ಒಂದು ತಿಂಗಳ ನಂತರ ಪೋಲಿಸ್ ರವರು ನಮ್ಮ ಮನೆಯ ಹತ್ತಿರ ಬಂದು ಆರೋಪಿತರನ್ನು ತೋರಿಸಿರುತ್ತಾರೆ. ಕಳ್ಳತನವಾದ ವಸ್ತುಗಳು ನನಗೆ ಸಿಕ್ಕಿರುವುದಿಲ್ಲ. ಸಾಕ್ಷಿಗೆ ಅಮಾನತ್ತು ಮಹಜರ್ ನ್ನು ತೋರಿಸಲಾಯಿತು. ಸಾಕ್ಷಿ ಅಮಾನತ್ತು ಮಹಜರ್ ನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿರುತ್ತಾರೆ. ಅದನ್ನು ನಿಪಿ-10 ಎಂದು ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ನಮ್ಮ ಮನೆಯಲ್ಲಿ ಕಳ್ಳತನವಾದ ಲಕ್ಷ್ಮಿ ಮುಖವಾಡ ಸಿಕ್ಕಿದೆ ಎಂದು ಮಹಜರ್ ಬರೆದು ನನ್ನ ಮತ್ತು ಚಾಸಾ-3, 4 ರವರ ಸಮಕ್ಷಮ ಬೆಳಗ್ಗೆ 10.00 ರಿಂದ 12.00 ಗಂಟೆ ವರೆಗೂ ಬರೆದಿದ್ದಾರೆ. ನಮ್ಮ ಮನೆಯಲ್ಲಿ ಕಳ್ಳತನವಾದ ಲಕ್ಷ್ಮಿ ಮುಖವಾಡವನ್ನು ನಾನು ನೋಡಿದರೆ ಗುರುತಿಸುತ್ತೇನೆ. ಈ ಹಂತದಲ್ಲಿ ಅಮಾನತ್ತುಪಡಿಸಿಕೊಂಡ ಮುದ್ದೆ ಮಾಲು ನ್ಯಾಯಾಲಯದ ಮುಂದೆ ಹಾಜರುಪಡಿಸದ ಕಾರಣ ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚುಮಾಡಲಾಯಿತು.)

ಓ . ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,

C.C.No.1241/2021
PW-7
CW-1

ಪಾವಗಡ

C.C.No.1241/2021
PW-7
CW-1